ಜನರಿಗೆ ಸಿಗುವ ರೀತಿ ಮಾಡಿದರೆ ದೇಶಕ್ಕೆ ಒಳ್ಳೆಯ ಸೇವೆ ಮಾಡಿದಂತಾಗುತ್ತದೆ. ಆದ ರಿಂದ ನಿಮ್ಮ ಡ್ರಗ್ಸ್ ಇನ್ಸ್‌ಪೆಕ್ಟರ್‌ಗಳನ್ನು ನೀವು ಪೂರ್ತಿ ಕಂಟ್ರೋಲ್‌ನಲ್ಲಿ ತೆಗೆದುಕೊಳ್ಳಬೇಕು, ಇದು ಒಂದು.

೪–೦೦ ಪಿ. ಎಂ.

ಎರಡನೆಯದಾಗಿ ಈಗ ಈ ಔಷಧ ಅಂಗಡಿಗಳವರು ಮುಷ್ಕರ ಮಾಡಿರುವ ಬಗ್ಗೆ ನಾವು ಕೇಳಿದ ಪ್ರಶ್ನೆಗೆ ತಾವು ಒಂದು ಮಾತನ್ನು ಸಹ ಹೇಳಲಿಲ್ಲ. ಈಗಲಾದರೂ ಸಹ ತಾವು ಈ ಮುಷ್ಕರಕ್ಕೆ ಕಾರಣರಾದ ಸಂಘಟನೆಯವರನ್ನು ಕರೆಸಿ ಮಾತನಾಡಬೇಕು ಮತ್ತು ಇದನ್ನು ವಾಪಸ್ ತೆಗೆದುಕೊಳ್ಳುವಂತೆ ಅವರಿಗೆ ಹೇಳಲು ತಾವು ಪ್ರಯತ್ನ ಮಾಡಬೇಕು. ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯ ಎಂದು ತಾವು ಹೇಳಬಹುದು. ಆದರೂ ಸಹ ತಾವು ಈ ಬಗ್ಗೆ ಪ್ರಯತ್ನ ಮಾಡಿ ನೋಡಬೇಕು. ಈಗ ಎಲ್ಲ ಅಂಗಡಿಗಳೂ ಸಹ ಬಂದ್ ಆಗಿವೆ. ಆದ್ದರಿಂದ ಈ ಬಗ್ಗೆ ತಾವು ಕೂಡಲೇ ಅವರ ಜೊತೆ ಮಾತುಕತೆ ನಡೆಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.— ಕೆಲವು ಔಷಧಗಳು ಮಾರಾಟ ಆಗುತ್ತಿರುವುದನ್ನು ತಪ್ಪಿಸಲು ಒಂದು ಸೆಲ್ ರಚನೆ ಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಎರಡನೆಯದಾಗಿ ಈಗ ಮುಷ್ಕರ ನಡೆಯುತ್ತಿರುವುದರಿಂದ ಕೆಲವು ಔಷಧಗಳ ಬೆಲೆಗಳು ಹೆಚ್ಚಿದ ಮತ್ತು ಬಡವರಿಗೆ ಸರಿಯಾಗಿ ಸಿಗುತ್ತಿಲ್ಲವೆಂದು ಹೇಳಿದ್ದಾರೆ, ಇದನ್ನು ಸಹ ಪರಿಶೀಲನೆ ಮಾಡಿ ಈ ಬಗ್ಗೆ ಸೂಕ್ತ ರೀತಿಯಲ್ಲಿ ಕ್ರಮ ಕೈಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ನಿಯಮ ೫೩ಳಿರ ಮೇರೆಗೆ

ವಿಷಯ.—(೧) ಲೋಕೋಪಯೋಗಿ ಇಲಾಖೆಯಲ್ಲಿರುವ ದಿನಗೂಲಿ ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ.

ಶ್ರೀ ಆರ್. ಪುಟ್ಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕರ್ನಾಟಕದಾದ್ಯಂತ ಲೋಕೋಪಯೋಗಿ ಇಲಾಖೆಯಲ್ಲಿ ಸಾವಿರಾರು ದಿನಗೂಲಿ ಕಾರ್ಮಿಕರಿದ್ದಾರೆ. ಅವರನ್ನು ಖಾಯಂ ಮಾಡಿಲ್ಲ. ಸುಪ್ರೀಂ ಕೋರ್ಟಿನ ತೀರ್ಪಿನ ಪ್ರಕಾರ ಕೂಡ ಅವರನ್ನು ಖಾಯಂಗೊಳಿಸಿ "ಸಮಾನ ಕೆಲಸಕ್ಕೆ ಸಮಾನ ವೇತನ" ಎಂಬ ಸರ್ವವಿಧಿತ ಒಪ್ಪಂದದ ಪ್ರಕಾರ ಖಾಯಂಗೊಳಿಸಿ ನ್ಯಾಯ ಪರಿಹಾರ ಕೊಡುವುದು ಸೂಕ್ತ. ಆದರೂ ಈ ವೇಳೆಗೆ ಅವರಿಗೆ ಖಾಯಂ ಮಾಡಲಿಲ್ಲ. ಬಿಸಿಲು ಮಳೆಯೆನ್ನದೆ ಹಗಲೆಲ್ಲಾ ದುಡಿದು ರಸ್ತೆಯನ್ನು ದುರಸ್ತಿಗೊಳಿಸಬೇಕಾಗಿದೆ. ಹೆಚ್ಚಾಗಿ ಕೃಷಿ ಕಾರ್ಮಿಕ ವರ್ಗದಿಂದ ಬಂದಿರುವ ಈ ಬಡ ಕಾರ್ಮಿಕರ ಕಷ್ಟ ಅಸದಳವಾಗಿದೆಯಾದರೂ. ಅವರು ನೂರಾರು ಸಲ ಧರಣಿ ಸತ್ಯಾಗ್ರಹವನ್ನು ನಡೆಸಿದರೂ ಸಹ ಅವರ ಕ್ರೋಧನ ಅರಣ್ಯರೋಧನವಾಗಿದೆ. ಆದುದರಿಂದ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಇವರನ್ನು ಖಾಯಂಗೊಳಿಸಲು ತುರ್ತು ಕ್ರಮ ಕೈಕೊಳ್ಳಬೇಕೆಂದು ಮತ್ತು ಈ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಲೋಕೋಪಯೋಗಿ ಸಚಿವರು).—ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ದಿನಗೂಲಿ ನೌಕರರಿಗೆ ಕನಿಷ್ಟ ವೇತನ ಕಾಯಿದೆ ಪ್ರಕಾರ ವೇತನ ಮತ್ತು ಜೀವನ ನಿರ್ವಹಣೆ ಭತ್ಯವನ್ನು ಪಾವತಿ ಮಾಡಲಾಗುತ್ತಿದೆ. ಈ ನೌಕರರು ಸರ್ವೋಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ ತಮಗೂ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕೆಂದು ಹಾಗೂ ತಮ್ಮ ಸೇವೆಯನ್ನು ಕ್ರಮಬದ್ಧಗೊಳಿಸಬೇಕೆಂದು ಕೋರ್ಥಿಸಿದ್ದಾರೆ.

ಸದರಿ ದಿನಗೂಲಿ ನೌಕರರನ್ನು ಯಾವುದೇ ಮಂಜೂರಾಗದ ಖಾಲಿ ಹುದ್ದೆಗಳಲ್ಲಿ ನೇಮಕ ಮಾಡಿಲ್ಲ. ಕೆಲಸದ ಅವಶ್ಯಕತೆಗೆ ಅನುಗುಣವಾಗಿ ಅವರುಗಳನ್ನು ದಿನಗೂಲಿಯ ಮೇಲೆ ತಾತ್ಕಾಲಿಕವಾಗಿ ವಿವಿಧ ಯೋಜನಾ ಕೆಲಸಗಳ ಮೇಲೆ ನೇಮಿಸಿಕೊಳ್ಳಲಾಗಿತ್ತು. ದಿನಾಂಕ ೨೫-೭-೧೯೮೫ರಲ್ಲಿ

ಸದರಿ ನೌಕರರನ್ನು ಕೆಲಸದಿಂದ ತೆಗೆಯಬಾರದೆಂದು ಸರ್ವೋಚ್ಚ ನ್ಯಾಯಾಲಯ ತಡೆ ಆಜ್ಞೆ ಕೊಟ್ಟಿದ್ದರಿಂದ ಕೆಲಸದಲ್ಲಿ ಮುಂದುವರೆಸಲಾಗಿದೆ, ಅವರು ನಿರ್ವಹಿಸುವ ಕೆಲಸಗಳ ಖಾತೆಯಿಂದ ಅವರ ದಿನಗೂಲಿಯನ್ನು ಕೊಡಲಾಗುತ್ತಿದೆ. ಅವರು ನಿರ್ವಹಿಸಿದ ಕೆಲಸ ಮುಗಿದ ತಕ್ಷಣ ಬೇರೆ ಕೆಲಸವಿದ್ದರೆ ಅವರನ್ನು ಆ ಕೆಲಸದ ಮೇಲೆ ತೆಗೆದುಕೊಂಡು ಈ ಕೆಲಸದ ಖಾತೆಯಿಂದ ದಿನಗೂಲಿ ಕೊಡಬಹುದು. ಆದರೆ ಬದಲಿ ಕೆಲಸವಿಲ್ಲದಿದ್ದರೆ ಅವರನ್ನು ವಿಧಿಯಿಲ್ಲದೇ ಕೆಲಸದಿಂದ ತೆಗೆಯಬೇಕಾಗಿರುತ್ತದೆ. ಈಗ ಯೋಜನಾ ಕೆಲಸಗಳು ನಡೆಯುವ ಸ್ಥಳಗಳಲ್ಲಿ ಸಹ ಈ ಯೋಜನೆಗಳು ಕೊನೆಗೊಂಡನಂತರ ಯಾವುದೇ ಹೊಸ ಯೋಜನೆಗಳು ಇರಲಾರದು. ಆದ್ದರಿಂದ ಈ ಎಲ್ಲಾ ದಿನಗೂಲಿ ನೌಕರರ ಸೇವೆಯೂ ಖಾಯಂ ಮಾಡಿಸಲು ಆರ್ಹವಾಗಿಲ್ಲ.

ದಿನಗೂಲಿ ನೌಕರರು ಸಲ್ಲಿಸಿರುವ ರಿಟ್ ಅರ್ಜಿಗಳಲ್ಲಿ ಸರ್ವೋಚ್ಚ ನ್ಯಾಯಾಲಯ ಇನ್ನೂ ಅಂತಿಮ ತೀರ್ಪು ನೀಡಿರುವುದಿಲ್ಲ. ಈ ವಿಷಯದಲ್ಲಿ ಮುಂದಿನ ಕ್ರಮ ಜರುಗಿಸಲು ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಮಾನವನ್ನು ಕಾಯಲಾಗಿದೆ.

(೨) ದ. ಕ. ಜಿಲ್ಲೆಯ ರಿಕ್ಷಾ ಚಾಲಕರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲಾ ಆಟೋರಿಕ್ಷಾ ಚಾಲಕರ ಸಂಘದವರು ಇತ್ತೀಚೆಗೆ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರಲ್ಲವೇ ಈ ಸಂದರ್ಭದಲ್ಲಿ ರಿಕ್ಷಾ ಮೀಟರ್ ದರವನ್ನು ಪರಿಷ್ಕರಿಸಬೇಕು ಹೊರಗಿನ ಪಟ್ಟಣಗಳ ರಹದಾರಿಯನ್ನು ಹೊಂದಿದ ರಿಕ್ಷಾಗಳು ಪರ್ಮಿಟ್ ನಿಯಮವನ್ನು ಸುರುಪಯೋಗಪಡಿಸದಂತೆ ಕ್ರಮ ತೆಗೆದುಕೊಳ್ಳಬೇಕು, ಪರವಾನಿಗಿ ಇಲ್ಲದೆ ಮಂಗಳೂರು ನಗರದಲ್ಲಿ ಓಡುತ್ತಿರುವ ರಿಕ್ಷಾಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸತ್ಯಾಗ್ರಹದ ಮೇಳೆ ಬೇಡಿಕೆಗಳನ್ನು ಮುಂದಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಲ್ಲವೇ ಆಟೋರಿಕ್ಷಾದವರಿಗೆ ಮಂಗಳೂರಿನಲ್ಲಿ ಸೂಕ್ತ ವ್ಯವಸ್ಥೆ ಮಾಡುತ್ತೀರಾ ಈ ಕುರಿತು ಮಾನ್ಯ ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು ಅವರು ವರದಿ ಮಾಡಿರುವಂತೆ ದಕ್ಷಿಣ ಕನ್ನಡ ಜಿಲ್ಲಾ ಆಟೋರಿಕ್ಷಾ ಚಾಲಕ ಸಂಘದವರಿಂದ ಸತ್ಯಾಗ್ರಹದ ಬಗ್ಗೆ ಯಾವುದೇ ಮಾಹಿತಿ ಪ್ರಾದೇಶಿಕ ಸಾರಿಗೆ ಕಛೇರಿಗೆ ಬಂದಿರುವುದಿಲ್ಲ. ಆದರೆ ಅವರು ಮೀಟರ್ ದರ ಪರಿಷ್ಕರಣೆ ಮತ್ತಿತರ ಬೇಡಿಕೆಗಳ ಬಗ್ಗೆ ತಾರೀಖು ೧೯-೫-೮೮ರಂದು ಸತ್ಯಾಗ್ರಹ ಮಾಡುವುದಾಗಿ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ದಿನಾಂಕ ೧೯-೫-೮೮ರಂದು ಜಿಲ್ಲಾ ಅಧಿಕಾರಿಗಳ ಎಚ್ಚರಿಕೆಯ ಮುಂಚೆ ಸತ್ಯಾಗ್ರಹ ಮಾಡಿದ್ದರು. ಆದರೆ, ಅವರ ಬೇಡಿಕೆಗಳ ಬಗ್ಗೆ ಪ್ರಾದೇಶಿಕ ಸಾರಿಗೆ ಕಚೇರಿಗೆ ಯಾವುದೇ ಮಾಹಿತಿ ಇಲ್ಲ, ಹಾಗೂ ಮಂಗಳೂರು ನಗರದಲ್ಲಿ ಪರವಾನಿಗೆ ಇಲ್ಲದೆ ಓಡಾಡುವ ಆಟೋರಿಕ್ಷಗಳ ಬಗ್ಗೆಯೂ ಯಾವುದೇ ದೂರುಗಳು ಬಂದಿಲ್ಲ. ಆದರೆ ಸೂರಕ್ಕಲ್ ಮತ್ತು ಮುಲ್ಕಿ ವ್ಯಾಪ್ತಿಯ ಆಟೋರಿಕ್ಷಾ ಪರವಾನಿಗೆದಾರರು ತಾಲ್ಲೂಕಿನಾದ್ಯಂತ ಓಡಾಡಲು ಅನುಮತಿ ಹೊಂದಿದ್ದು ಅವರು ಮಾತ್ರ ಮಂಗಳೂರು ನಗರದಲ್ಲಿ ಓಡಾಡುತ್ತಿದ್ದಾರೆ. ಈ ಬಗ್ಗೆ ತಾಲ್ಲೂಕು ಪರವಾನಿಗೆಗಳನ್ನು ಸಾರಿಗೆ ಪ್ರಾಧಿಕಾರವು ರದ್ದು ಮಾಡಿದ್ದರು. ಅದರ ಮೇಲೆ ಕರ್ನಾಟಕ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ. ಉಚ್ಚ ನ್ಯಾಯಾಲಯವು ಕೆಲವು ಕೇಸುಗಳಲ್ಲಿ ತೀರ್ಪು ನೀಡಿದ್ದು ತಾಲ್ಲೂಕು ಪರವಾನಿಗೆ ರದ್ದು ಮಾಡಿದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಆಜ್ಞೆಯನ್ನು ತಿರಸ್ಕರಿಸಿರುತ್ತಾರೆ. ಆದರೆ ಕೆಲವು ಕೇಸುಗಳಲ್ಲಿ ಇನ್ನೂ ಇತ್ಯರ್ಥಕ್ಕೆ ಬಾಕಿ ಇದೆ. ಈ ಬಗ್ಗೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ತನ್ನ ಸಭೆಯಲ್ಲಿ ಚರ್ಚಿಸಿ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ. ಆದರೆ ಆಟೋರಿಕ್ಷಾ ಪರವಾನಿಗೆಯ ವ್ಯಾಪ್ತಿಯ ನಿರ್ಣಯದ ಬಗ್ಗೆ ಸಾರಿಗೆ ಪ್ರಾಧಿಕಾರದ ಮುಂದೆ ಬಾಕಿ ಇರುತ್ತದೆ.

ಆಟೋರಿಕ್ಷಾಗಳಿಗೆ ಏಕರೂಪ ಬಾಡಿಗೆ ದರಗಳನ್ನು ನಿಗದಿಪಡಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.